ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 24-30
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಸುಲಭದಲ್ಲಿ ಸಜ್ಜನರಾಗಲಾರಿರಿ: ಆದರ್ಶ ಮತ್ತು ಆತಂಕಗಳ ನಡುವಿನ ಸಂಘರ್ಷ

ಸುನೀತ ಎಲ್. ಎಸ್[1] ಮತ್ತು ಡಾ. ಬಿ. ಎಸ್. ಸುದೀಪ್[2]
[1]ಸಂಶೋಧನಾ ವಿದ್ಯಾರ್ಥಿ, [2]ಸಹ ಪ್ರಾಧ್ಯಾಪಕರು
ಕನ್ನಡ ಸ್ನಾತಕೋತ್ತರ ವಿಭಾಗ, ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಮೈಸೂರು.

**Abstract:**

*ಕನ್ನಡ ಹಾಸ್ಯ ಸಾಹಿತ್ಯ ಪ್ರಪಂಚದಲ್ಲಿ ಲೇಖಕಿಯರ ನಡುವೆ ತಮ್ಮದೇ ಆದ ಛಾಪು ಮೂಡಿಸಿದವರು ಭುವನೇಶ್ವರಿ ಹೆಗಡೆ ಅವರು. ಇವರು ವಿಶೇಷವಾಗಿ 'ಲಲಿತ ಪ್ರಬಂಧ' ಸಾಹಿತ್ಯ ಕ್ಷೇತ್ರದಲ್ಲಿ ಹೆಗ್ಗುರುತನ್ನು ಮೂಡಿಸಿದವರು. ಇವರು ಪ್ರಬಂಧಗಳಲ್ಲಿ ಹಾಸ್ಯದ ಹೊನಲಿನೊಟ್ಟಿಗೆ ವಿಚಾರಲಹರಿಯನ್ನು ತುಂಬಿ ಮಂದಸ್ಮಿತಗೊಳಿಸುವ ಕಲೆಗಾರಿಕೆಯನ್ನು ಹೊಂದಿದ್ದಾರೆ. ಇದಕ್ಕೆ ನಿದರ್ಶನ ಇವರ 'ಸುಲಭದಲ್ಲಿ ಸಜ್ಜನರಾಗಲಾರಿರಿ' ಎಂಬ ಲಲಿತ ಪ್ರಬಂಧ. ಯಾವುದೇ ವ್ಯಕ್ತಿ 'ಸಾಮಾಜಿಕ ಪ್ರಜ್ಞೆ'ಯನ್ನು ಅರ್ಥೈಸಿಕೊಳ್ಳದೆ ಸಮಾಜದ ನಡುವೆ ಹೀಗೆಯೇ ಬದುಕುತ್ತೇನೆ ಎಂಬ ಬದ್ಧತೆಗೆ ಒಳಗಾದಾಗ ಆಗುವ ಮಾನಸಿಕ ತೊಳಲಾಟಗಳು, ಅನುಭವಗಳಿಂದ ಬದಲಾಗುವ ನಿರ್ಧಾರಗಳು ಸಮಾಜದೊಂದಿಗೆ ನಾವು ಇರಬೇಕಾದ ಪರಿಯನ್ನು ಈ ಲಲಿತ ಪ್ರಬಂಧ ಅರ್ಥೈಸುತ್ತದೆ.*

**Keywords:** *ಕನ್ನಡ ಸಾಹಿತ್ಯ, ಹಾಸ್ಯ ಸಾಹಿತ್ಯ, ಭುವನೇಶ್ವರಿ ಹೆಗಡೆ, ಲಲಿತ ಪ್ರಬಂಧ*

## ಪೀಠಿಕೆ

ಸಮಾಜದೊಡನೆ ಜೀವಿಸುವಾಗ ಸಜ್ಜನರಾಗಿ ಬದುಕಬೇಕೆಂಬ ದೀಕ್ಷೆ ತೊಟ್ಟು ಅದರಂತೆ ನಿಯಮಬದ್ಧವಾಗಿ ನಡೆದುಕೊಳ್ಳುವುದು ಸಾಮಾನ್ಯ ವಿಷಯವಲ್ಲ. ಕೆಲವೊಮ್ಮೆ ನಮ್ಮನ್ನು ಪರೀಕ್ಷಿಸಲೆಂದೇ ಈ ಸವಾಲುಗಳು ಅಥವಾ ಸನ್ನಿವೇಶಗಳು ಒದಗಿಬರುತ್ತವೋ ಎನ್ನುವಂತೆ ಭಾಸವಾಗುತ್ತದೆ. ಇಂತಹ ಸಂದರ್ಭದಲ್ಲಿ ನಾವು ಹಾಕಿಕೊಂಡ ಆದರ್ಶಗಳನ್ನು ಪಾಲಿಸಲೂ ಆಗದೆ, ತಿರಸ್ಕರಿಸಲೂ ಆಗದೆ ಇದ್ದಾಗ ಮನಸ್ಸಿನಲ್ಲಿ ಆತಂಕಕಾರಿ ವಾತಾವರಣ ಹೇಗೆ ನಿರ್ಮಾಣವಾಗುತ್ತದೆ ಎನ್ನುವುದರ ಜೊತೆಗೆ ಅನುಭವಗಳು ಬೆನ್ನಟ್ಟಿದಾಗ ಮನುಷ್ಯನ ಜೀವನದಲ್ಲಿ ನಿರ್ಧಾರಗಳು ಹೇಗೆ ಬದಲಾಗುತ್ತವೆ ಎನ್ನುವ ವಾಸ್ತವತೆ ಮತ್ತು ಸಾಮಾಜಿಕ ಸಂದೇಶವು ಈ ಪ್ರಬಂಧದಲ್ಲಿ ಅಭಿವ್ಯಕ್ತಗೊಂಡಿದೆ.

"ಯಾರು ಹುಟ್ಟಾ ಕೆಟ್ಟವರಲ್ಲದಿದ್ದರೂ ಕೆಟ್ಟ ಗುಣಗಳು ಆಗಾಗ ಮನುಷ್ಯನತ್ತ ಗಾಳಿ ಬೀಸಿ ಅವನನ್ನು ತಮ್ಮತ್ತ ಎಳೆದುಕೊಳ್ಳುತ್ತವೆಯೆಂಬುದು ಜ್ಞಾನಿಗಳ ಮಾತು. ದುರದೃಷ್ಟವೆಂದರೆ ನಾವು ಗಾಳಕ್ಕೆ ಸಿಕ್ಕಿ ಬಿದ್ದಿದ್ದೇವೆ ಎಂಬ ಅರಿವೇ ಇಲ್ಲದೆ ಬಹಳ ಮಂದಿಯ ಜೀವನ ಮುಗಿದುಹೋಗುತ್ತದೆಯಂತೆ. ಎಲ್ಲೋ ಕೆಲವರಿಗೆ ಈ ಗಾಳದ ಪ್ರಜ್ಞೆ ಜೀವನದ ಮಧ್ಯಭಾಗದಲ್ಲಾದರೂ ಉಂಟಾಗಿ ಅದನ್ನು ಹರಿದೊಗೆಯಬೇಕೆಂದು ಅರಿವಾಗುತ್ತದೆಯಂತೆ.

**Please cite this article as:** ಸುನೀತ, ಎಲ್.ಎಸ್ ಮತ್ತು ಬಿ.ಎಸ್. ಸುದೀಪ್. (2026). ಸುಲಭದಲ್ಲಿ ಸಜ್ಜನರಾಗಲಾರಿರಿ: ಆದರ್ಶ ಮತ್ತು ಆತಂಕಗಳ ನಡುವಿನ ಸಂಘರ್ಷ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(3), 24–30

ಗಾಳಕ್ಕೆ ಕುತ್ತಿಗೆಯನ್ನೆ ಒಡ್ಡದ ಜಿತೇಂದ್ರಿಯರು ಕ್ವಚಿತ್ತಾಗಿ ಎಲ್ಲೋ ಒಬ್ಬಿಬ್ಬರು ಸಿಕ್ಕರೆ ಹೆಚ್ಚು"[1] ಹೀಗಿರುವಾಗ ಸಮಾಜದ ಪ್ರತಿನಿಧಿಯಾದ ಪ್ರಬಂಧಕಾರರಿಗೆ ಇದ್ದಕ್ಕಿದ್ದಂತೆ ಸಜ್ಜನರ ಸಾಲಿಗೆ ಸೇರಬೇಕೆಂಬ ಪ್ರೇರಣೆಯಾಯಿತಂತೆ. ಹಾಗಾದರೆ ಇಲ್ಲಿಯವರೆಗೆ ಕೆಟ್ಟವರಾಗಿದ್ದೇವೆಯೇ ಎಂಬ ಆತ್ಮವಿಮರ್ಶೆಗೂ ಒಳಪಡಿಸಿಕೊಂಡು ಸಾಧಕರೊಬ್ಬರನ್ನು ಭೇಟಿ ಮಾಡಿ ಉತ್ತರವನ್ನು ಕಂಡುಕೊಂಡರು. ಆ ಸಾಧಕರ ಪ್ರಕಾರ ಇಂಗ್ಲಿಷಿನ 'ಜಂಟ್ಲ್‌ಮನ್' ಆಗಲು ಶಿಷ್ಟ ಮತ್ತು ಸಭ್ಯ ಆಗಿದ್ದರೆ ಸಾಕು. ಆದರೆ ಕನ್ನಡದ 'ಸಜ್ಜನ' ಆಗಲು ಹೇಗಿರಬೇಕು ಎಂಬುದನ್ನು ಹೇಳಲು ಅವರು 'ಸಜ್ಜನ ಚರಿತಸಾರ' ಎಂಬ ಪುಸ್ತಕವನ್ನು ನೀಡುವುದರ ಮೂಲಕ ಉತ್ತರಿಸಿದರು. ಅದರಲ್ಲಿ ಪ್ರಮುಖವಾಗಿ 6 ಗುಣಗಳನ್ನು ಗುರುತಿಸಿದ್ದರು. ಅದನ್ನು ಪಾಲಿಸಿ ಸಜ್ಜನರಾಗುವ ಬದ್ಧತೆಯನ್ನು ಕಾಪಾಡಿಕೊಳ್ಳಬೇಕು ಎಂಬ ದೀಕ್ಷೆಯನ್ನು ಕೈಗೊಂಡರು; ಮುಂಬರುವ ಸನ್ನಿವೇಷಗಳ ಪರಿವೇ ಇಲ್ಲದೆ. ಅವುಗಳೆಂದರೆ–

1. ಸತ್ಯವನ್ನೇ ನುಡಿಯಬೇಕು
2. ಪರೋಪಕಾರಿಯಾಗಿರಬೇಕು
3. ಗುರು ಹಿರಿಯರಿಗೆ ವಿಧೇಯರಾಗಿರಬೇಕು
4. ಪರಮತ ಸಹಿಷ್ಣು ಮತ್ತು ಪರನಿಂದೆ ರಹಿತರೂ ಆಗಿರಬೇಕು
5. ಯಾರ ಮನಸ್ಸನ್ನು ನೋಯಿಸಬಾರದು
6. ವೈರಿಗಳನ್ನೂ ಪ್ರೀತಿಸಬೇಕು

ಈ ಆರು ವಿಚಾರಗಳನ್ನು ಕುರಿತು ಹೇಳುವುದಾದರೆ ಪ್ರಸಕ್ತ ಹಾಗೂ ಪೂರ್ವಜರ ಬದುಕಿನ ಕ್ರಮವು ಕಾಲದಿಂದ ಕಾಲಕ್ಕೆ ವ್ಯತ್ಯಾಸವಾಗುತ್ತಿರುವುದನ್ನು ಗುರುತಿಸುವುದರ ಮೂಲಕ ಮಾನವೀಯ ಮೌಲ್ಯಗಳು ಯಾವ ದಿಕ್ಕಿನತ್ತ ಸಾಗುತ್ತಿವೆ ಎಂಬ ಸೂಕ್ಷ್ಮತೆಯನ್ನು ವಿಚಾರ ಮಂಥನ ಮಾಡಲಾಗುತ್ತದೆ. ಇದರಿಂದ ಲಲಿತ ಪ್ರಬಂಧಗಳು ಕೂಡ ಹೇಗೆ ವಿನೋದದೊಂದಿಗೆ ವಿಚಾರ ಲಹರಿಯನ್ನು ಹೊಂದಿವೆ ಎಂಬುದು ಅರಿವಿಗೆ ಬರುತ್ತದೆ. ಪ್ರಬಂಧದಲ್ಲಿ ಸತ್ಯವನ್ನು ಕುರಿತು ಒಂದು ಸನ್ನಿವೇಶವು ಹೀಗೆ ವ್ಯಕ್ತಗೊಂಡಿದೆ. ವ್ಯಕ್ತಿಯೊಬ್ಬರು ಒಮ್ಮೆ ಬಂಧುಗಳ ಮನೆಗೆ ಕಾರ್ಯನಿಮಿತ್ತ ಹೋಗಬೇಕಾಗುತ್ತದೆ. ಇದೇ ಸಂದರ್ಭದಲ್ಲಿ ಆ ಮನೆಯ ಮಗಳಿಗೆ ಹೆರಿಗೆಯಾಗಿ ಮಗುವಿಗೆ 2–3 ತಿಂಗಳಾಗಿರುತ್ತದೆ. ಆಗ ಮಗುವನ್ನು ಎತ್ತಿಕೊಳ್ಳುವ ಸಂದರ್ಭ ಬರುತ್ತದೆ. ಅತಿಥಿಗೋ ಸತ್ಯವನ್ನು ಹೇಳಲಾಗದ ಪರಿಸ್ಥಿತಿ. ಆ ಹಸುಗೂಸನ್ನು ಎತ್ತಿಕೊಳ್ಳಲು ಭಯ. ಒಂದು ವೇಳೆ ಎತ್ತಿಕೊಂಡರೆ ಮಗು ಹೊಸ ಸ್ಪರ್ಶಕ್ಕೆ ಉಚ್ಚೆ ಮಾಡುವುದು ಸಹಜ. ಮನೆಯವರಿಗೆ ಇದರಿಂದ ಸಂತೋಷವಾದರೆ, ಅತಿಥಿಗೆ ಹೊಸ ಬಟ್ಟೆಗೆ ಉಚ್ಚೆ ಮಾಡಿತೆಂದು ಪೀಕಲಾಟ. ಈ ಸಂದರ್ಭದಲ್ಲಿ ಸಜ್ಜನರಾಗುವ ಇಲ್ಲವೆ ನಮ್ಮ ಕುಟುಂಬದಲ್ಲಿ ಸಾವಾಗಿದ್ದು ಮಗುವನ್ನು ಈಗ ಎತ್ತಿಕೊಳ್ಳುವುದು ಬೇಡ ಎಂಬಂತಹ ಏನಾದರೂ ಸುಳ್ಳು ಹೇಳಿ ಸಜ್ಜನರಾಗುವ ಅವಕಾಶದಿಂದ ವಂಚಿರಾಗುವುದು ಆ ವ್ಯಕ್ತಿಯ ನಿರ್ಧಾರಕ್ಕೆ ಬಿಟ್ಟ ವಿಷಯ.

ಸತ್ಯವನ್ನು ಹೇಳುವುದರಿಂದ ಮನೆಯವರಿಗಾಗಲಿ, ಅತಿಥಿಗಾಗಲಿ ಯಾವುದೇ ತೊಂದರೆ ಇಲ್ಲ. ಆದರೆ ಈ ಸಣ್ಣ ಸಣ್ಣ ಸತ್ಯವನ್ನು ಪರಸ್ಪರ ಮುಕ್ತವಾಗಿ ಒಪ್ಪಿಕೊಳ್ಳುವ ಮನಸ್ಸು ಬೇಕು ಅಷ್ಟೇ. ಆದರೆ ಇಂದಿನ ದಿನಗಳಲ್ಲಿ ಸಂಕುಚಿತ ಮನಸ್ಥಿತಿಗಳೇ ಹೆಚ್ಚು ಇರುವುದರಿಂದ ಬಹುಪಾಲು ಮುಖವಾಡದ ಜೀವನವೇ ಸಾಗುತ್ತಿದೆ ಎನ್ನುವುದು ನಿಸ್ಸಂಶಯವಾದದ್ದು. ಇದರಿಂದ ಮನುಷ್ಯ ಮನುಷ್ಯರ ನಡುವಿನ ಪ್ರೀತಿ, ವಿಶ್ವಾಸ, ನಂಬಿಕೆಗೆ ಪೆಟ್ಟು ಬೀಳುತ್ತದೆ. ಹೀಗೆ ಕೌಟುಂಬಿಕವಾಗಿಯೇ ಹೀಗಾದರೆ ಸಾಮಾಜಿಕವಾಗಿ ಎಲ್ಲೆಡೆ ಸತ್ಯವನ್ನು ನಿರೀಕ್ಷಿಸುವುದು ಬಹುದೂರದ ಮಾತಾಗಿರುತ್ತದೆ.

ಸತ್ಯ ಕಹಿಯಾದರೂ ಭೂಮಿಯ ಮೇಲೆ ಸತ್ಯದ ಛಾಯೆ ಉಳಿದಿಲ್ಲ ಎಂದರ್ಥವಲ್ಲ. ಮಹಾಭಾರತದ ಪಾಂಡವರು, ರಾಮಾಯಣದ ರಾಮಲಕ್ಷ್ಮಣರು ಹಾಗೆಯೇ ಅಯೋಧ್ಯೆಯನ್ನು ಆಳುತ್ತಿದ್ದ ರಾಜ

ಸತ್ಯಹರಿಶ್ಚಂದ್ರ ಮೊದಲಾದವರು ಸತ್ಯದ ಹಾದಿಯಲ್ಲೇ ನಡೆದು ಅಜರಾಮರರಾಗಿದ್ದಾರೆ. ಮೊದಲೇ ಹೇಳಿದ ಹಾಗೆ ಕೌಟುಂಬಿಕವಾಗಿಯೇ ಸತ್ಯದ ಹಾದಿಯನ್ನು ನಿಭಾಯಿಸಲು ಹೆಣಗಾಡುವ ಅನೇಕ ಸಂದರ್ಭಗಳು ಬರುತ್ತವೆ. ಇಂತಹ ಸಂದರ್ಭದಲ್ಲಿ ರಾಜರು ಸತ್ಯದ ಹಾದಿ ಕಠೋರ ಎಂದು ತಿಳಿದಿದ್ದರೂ ಸತ್ಯವನ್ನೆ ಉಸಿರಾಗಿಸಿಕೊಂಡಿರುವಾಗ ದೇವರ ಆಶೀರ್ವಾದ ಯಾವುದೋ ರೂಪದಲ್ಲಿ ಲಭಿಸುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಸತ್ಯಕ್ಕಿಂತ ಸುಳ್ಳಿನ ಮೇಲಾಟವೇ ತಾಂಡವವಾಡುತ್ತಿರುವುದರಿಂದ ದೇವರು ಕೂಡ ಹೆದರಿ ದೂರವಿದ್ದಾನೆ ಎನಿಸುತ್ತದೆ. ಹಾಗಾಗಿ ಈ ವರ್ತಮಾನದ ದಿನಗಳಲ್ಲಿ ಯಾರು ಯಾರನ್ನು ನಂಬಿ ಬದುಕುವುದು ಎಂದು ತಿಳಿಯುವಷ್ಟರಲ್ಲಿ ಬದುಕು ಮುಗಿಯುವ ಹಂತಕ್ಕೆ ತಲುಪುತ್ತದೆ. ಅಂದರೆ ಸತ್ಯ ಅಲ್ಲಲ್ಲಿ ಕಾಣಸಿಗುತ್ತದೆಯೇ ಹೊರತು ಎಲ್ಲೆಲ್ಲೂ ಕಾಣಲು ಸಾಧ್ಯವಿಲ್ಲ. ಪರಿಣಾಮ ಮನುಷ್ಯರಲ್ಲಿ ಪರಸ್ಪರ ಇರಬೇಕಾದ ಪ್ರೀತಿ, ವಿಶ್ವಾಸ, ನಂಬಿಕೆ ಸಂಕುಚಿತ ಸ್ಥಿತಿಯಲ್ಲಿರುವುದು ಬೇಸರದ ಸಂಗತಿಯಾಗಿದೆ. ಎಲ್ಲಿಯವರೆಗೆ ಜನರು ಪರಸ್ಪರ ಸತ್ಯವನ್ನು ಒಪ್ಪಿಕೊಂಡು ಸತ್ಯದ ದಾರಿಯಲ್ಲಿ ಸಾಗಲು ತಯಾರಿಲ್ಲವೋ ಅಲ್ಲಿಯವರೆಗೆ ಮನುಷ್ಯ ಸಂಬಂಧಗಳು ಗಟ್ಟಿಯಾಗಿ ನಿಲ್ಲಲು ಸಾಧ್ಯವಿಲ್ಲ ಎಂಬುದು ವಾಸ್ತವವಾದ ವಿಚಾರವಾಗಿದೆ.

'ಸತ್ಯ' ಎಂದಾಗ ಪ್ರಸ್ತುತ ದಿನಗಳಲ್ಲಿ ಮುಖ್ಯವಾಗಿ ಈ ಕ್ಷೇತ್ರಗಳು ನೆನಪಿಗೆ ಬರುತ್ತದೆ. ಆಹಾರ, ಆರೋಗ್ಯ, ಶಿಕ್ಷಣ. ಇವುಗಳು ವಿವಿಧ ಸಂಸ್ಥೆಗಳ ಮೂಲಕ ಜನ ಸಾಮಾನ್ಯರಿಗೆ ಪೂರೈಕೆಯಾಗುತ್ತಿವೆ. ಇವು ಸತ್ಯದ ಹಾದಿಯಲ್ಲಿ ನಡೆದಾಗ ಮಾತ್ರ ಎಲ್ಲರಿಗೂ ಪ್ರಾಮಾಣಿಕವಾಗಿ ತಲುಪಲು ಸಾಧ್ಯ. ಆದರೆ ಸತ್ಯಕ್ಕೆ ಹೆಸರು ಈ ಕಛೇರಿಗಳೇ ಎನ್ನುವಷ್ಟರ ಮಟ್ಟಿಗೆ ಬೋರ್ಡುಗಳು, ಫಲಕಗಳು ಮತ್ತು ಅಧಿಕಾರಿಗಳು ಮೇಲ್ನೋಟಕ್ಕೆ ನಡೆದುಕೊಳ್ಳುತ್ತಾರೆ. ಆದರೆ ಒಳಗೊಳಗೆ ಅವ್ಯವಹಾರಗಳು ಸಾಕಷ್ಟು ಜರುಗುತ್ತವೆ. ಇದನ್ನು ಪ್ರಶ್ನಿಸಲು ಹೊರಟರೆ ಯಾವುದೇ ವ್ಯಕ್ತಿಗೆ ಸಿಗಬೇಕಾದ ಸಂಪೂರ್ಣ ಮೂಲಭೂತ ಸೌಕರ್ಯಗಳು ಪೂರೈಕೆಯಾಗದಿರುವುದರ ಜೊತೆಗೆ ಅಡೆತಡೆಗಳಿಲ್ಲದೆ ಬದುಕಲು ಸಾಧ್ಯವಿಲ್ಲ. ಹೀಗಿರುವಾಗ ಎಲ್ಲವನ್ನು ತನಿಖೆ ಮಾಡದೆ ಮೌನವಾಗಿ ಧರ್ಮಸಂಕಟವನ್ನು ಅನುಭವಿಸುತ್ತಾ, ಅನವಶ್ಯಕ ದಂಡಗಳನ್ನು ತೆರುತ್ತಾ ನಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಬೇಕಾಗುತ್ತದೆ. ಇದೇ ಪರಂಪರೆಯನ್ನು ಬಹುತೇಕರು ಅನುಸರಿಸುತ್ತಾ ಕುರಿಗಳಾಗಿ ಬದುಕುವ ಪರಿಸ್ಥಿತಿ ನಿರ್ಮಾಣವಾಗಿದೆ. ಪ್ರಾಮಾಣಿಕ ಅಧಿಕಾರ ವರ್ಗವಿದ್ದರೂ ಬೆರಳೆಣಿಕೆ ಮಾತ್ರ. ಇವರು ಬೃಹದಾಕಾರವಾಗಿ ಬೆಳೆದುಕೊಂಡಿರುವ ದೊಡ್ಡ ದೊಡ್ಡ ತಿಮಿಂಗಿಲಗಳನ್ನು ಏನೂ ಮಾಡಲಾಗದೆ ಕೈಕಟ್ಟಿ ಕುಳಿತುಕೊಳ್ಳುವಂತಾಗಿದೆ. ಒಂದು ವೇಳೆ ಪ್ರಶ್ನಿಸಿದರೂ ಅವರ ಪರಿಸ್ಥಿತಿ ಕಲ್ಲು–ಮುಳ್ಳಿನ ಹಾದಿಯಾಗಿರುತ್ತದೆ. ಈ ಸತ್ಯ ಗೊತ್ತಿದ್ದರೂ ಈ ದಾರಿಯಲ್ಲಿ ನಡೆದು ಜಯಿಸಿ ಇತಿಹಾಸ ನಿರ್ಮಿಸಿದವರು ವಿರಳ. ಆದರೆ ಬಹುತೇಕರು ಆದರ್ಶ ಮತ್ತು ಆತಂಕಗಳ ಒದ್ದಾಟದಲ್ಲೆ ಜೀವನವನ್ನು ಕಳೆದುಬಿಡುವುದರಿಂದ ಸುಳ್ಳಿನ ಜಗತ್ತು ಹೆಚ್ಚು ವಿಜೃಂಭಿಸುತ್ತಿದೆ.

ಸಜ್ಜನರಾಗಲು 'ಪರೋಪಕಾರಿಯಾಗಿರಬೇಕು' ಎನ್ನುವುದು ಎರಡನೆಯ ನಿಯಮ. ಪ್ರಬಂಧದ ನಿರೂಪಕರು ಸಮಾಜದ ಪರವಾಗಿ ಈ ಅಧಿನಿಯಮವನ್ನು ತೆಗೆಯಬೇಕೆಂಬ ತಿದ್ದುಪಡಿಯನ್ನು ಮಂಡಿಸಿದರೆ 'ಪರೋಪಕಾರಿ' ಎಂಬ ಹೆಸರಿನಲ್ಲಿ ಕೈ ಸುಟ್ಟುಕೊಂಡ ಎಲ್ಲರೂ ಕೈ ಎತ್ತುವುದು ಸಹಜ. ಇದಕ್ಕೆ ಕೆಲವು ನಿದರ್ಶನಗಳನ್ನು ನೀಡಿದ್ದಾರೆ. ಪುಸ್ತಕವನ್ನು ಓದಲು ತೆಗೆದುಕೊಂಡು ಮತ್ತೆ ಹಿಂದಿರುಗಿಸುವಾಗ ಮೂಲ ಸ್ವರೂಪವನ್ನು ಕಳೆದುಕೊಂಡಿರುವುದು. ಶುಭಕಾರ್ಯಗಳಿಗಾಗಿ ಕೊಟ್ಟ ಹೊಸ ಬಟ್ಟೆಯನ್ನು ಕಲೆಯೊಂದಿಗೆ ಹಿಂದಿರುಗಿಸುವುದು. ಪೆನ್ನು, ಪೆನ್ಸಿಲ್, ಸೂಜಿ, ಬೆಲ್ಲ, ಸಕ್ಕರೆ ಮೊದಲಾದವು ತೆಗೆದುಕೊಳ್ಳುವಾಗ ಅವಶ್ಯಕ ವಸ್ತುಗಳಾಗಿ, ಮತ್ತೆ ಹಿಂದಿರುಗಿಸುವಾಗ ಕ್ಷುಲ್ಲಕವೆಂದು

ಹಿಂದಿರುಗಿಸದಿರುವುದು. ಕೆಲವೊಮ್ಮೆ ಹಣವನ್ನು ತೆಗೆದುಕೊಳ್ಳುವಾಗ ಬಂಧು–ಬಳಗವಾಗಿ ವಾಪಸ್ಸು ಕೊಡುವಾಗ ಅಥವಾ ಕೇಳಿದಾಗ ಅಪರಿಚಿತರಾಗಿ ಗೋಚರಿಸುವ ಕ್ಷಣಗಳು... ಮೊದಲಾದವು ಪರೋಪಕಾರದ ಪಟ್ಟಿಯಲ್ಲಿ ಸೇರಿಕೊಳ್ಳುತ್ತವೆ. ಇಂತಹ ಅನೇಕ ಉದಾಹರಣೆಗಳನ್ನು ನೋಡಿದ ಮೇಲೆಯೂ ಇಂಗು ತಿಂದ ಮಂಗನಾಗುವುದು ವಿರಳ. ಆದರೆ ಪರೋಪಕಾರ ಗುಣಧರ್ಮವನ್ನು ಬೆಳೆಸಿಕೊಂಡವರು ಪದೇ ಪದೇ ಮೋಸ ಹೋದರೂ ಪರೋಪಕಾರವನ್ನು ಮಾಡುವುದನ್ನು ಬಿಡುವುದಿಲ್ಲ. ಇವರ ಬಳಿಯೂ ಸಜ್ಜನ ಚರಿತಾಸಾರ ಎಂಬ ಪುಸ್ತಕವಿರಬೇಕೆನ್ನುವುದು ನಿರೂಪಕರ ಅಭಿಪ್ರಾಯ. ಈ ಪರೋಪಕಾರಿ ಗುಣಧರ್ಮವನ್ನು ಮುಂದುವರಿಸಲು ಕಾರಣವೂ ಇದೆ ಎನ್ನುವುದಕ್ಕೆ ಒಂದು ನಿದರ್ಶನವನ್ನು ಕೊಡುವುದರ ಮೂಲಕ ಸಮಾಜದ ಅಲ್ಲಲ್ಲಿ ಇನ್ನೂ ಪರೋಪಕಾರ ಗುಣವು ನೆಲೆಸಿ ಮಾನವೀಯತೆ ಉಳಿದುಕೊಂಡಿದೆ ಎಂದು ಸಮಾಧಾನಿಸಿಕೊಳ್ಳಬೇಕಾಗುತ್ತದೆ.

ಭುವನೇಶ್ವರಿ ಹೆಗಡೆ ಅವರ ಅಭಿನಂದನಾ ಗ್ರಂಥವಾದ 'ಬನಸಿರಿ' ಹೊತ್ತಿಗೆಯಲ್ಲಿನ 'ಛಾತ್ರ ಸಿರಿ' ಭಾಗದಲ್ಲಿ ವಿದ್ಯಾರ್ಥಿಯೋರ್ವ 'ನಿಮ್ಮ ಉಪಕಾರ ಗುಣವನ್ನು ಕೆಲವರು ದುರುಪಯೋಗಪಡಿಸಿ ಕೊಳ್ಳುವಾಗ ನೀವು ಯಾಕೆ ಸಹಾಯ ಮಾಡುತ್ತೀರಿ ಎಂಬ ಪ್ರಶ್ನೆಗೆ 'ದುರುಪಯೋಗ ಪಡಿಸಿಕೊಳ್ಳುವವರ ನಡುವೆ ಅಗತ್ಯ ಇದ್ದವರಿಗೆ ತೊಂದರೆಯಾಗಬಾರದು' ಎಂಬ ನಿಲುವನ್ನು ವ್ಯಕ್ತಪಡಿಸಿದ್ದರು. ಇಂತಹ ಭಾವನೆಯುಳ್ಳವರು ಈ ವರ್ತಮಾನ ದಿನಗಳಲ್ಲಿ ವಿರಳವಾಗಿಯಾದರೂ ಉಳಿದುಕೊಂಡಿರುವುದರಿಂದ ಸಮಾಜದಲ್ಲಿ ಇನ್ನು ಉಸಿರಾಡಿಕೊಂಡಿರಲು ಸಾಧ್ಯವಾಗಿದೆ.

ಮೂರನೆಯ ಸಂಕಲ್ಪ 'ಗುರು ಹಿರಿಯರಿಗೆ ವಿಧೇಯರಾಗಿರಬೇಕು' ಎನ್ನುವುದು. ಪ್ರಬಂಧದ ನಿರೂಪಕರು ಸ್ನೇಹಿತೆಯೊಂದಿಗೆ ಪರಸ್ಪರ ಮಾತನಾಡಿಕೊಂಡು ಸಂತೆಗೆ ಹೋಗುವ ರೂಢಿಯಿತ್ತು. ತರಕಾರಿಯನ್ನು ತೆಗೆದುಕೊಂಡು ಮನೆಗೆ ಹೋಗುವಾಗ ಹಿಂದಿನಿಂದ ಅಧಿಕಾರಯುತ ವಾಣಿಯೊಂದು ಕೇಳಿಸಿತು. ಸ್ನೇಹಿತೆ ವಾರೆಗಣ್ಣಿನಿಂದ ನೋಡಿ ಸಮಸ್ಯೆಯನ್ನು ಅರಿತು ಪ್ರತಿಕ್ರಿಯಿಸದಂತೆ ಸೂಚಿಸಿದಳು. ಆದರೆ ಸಜ್ಜನಳಾಗುವ ದೀಕ್ಷೆ ತೊಟ್ಟ ಕಾರಣ ಮಾಜಿ ಗುರುಗಳಿಗೆ ಸ್ಪಂದಿಸಬೇಕಾಯಿತು. ಅವರು ಕೊಟ್ಟ ಎರಡು ಮಣಭಾರದ ದಿನಸಿ ಚೀಲಗಳನ್ನು ಮನೆಗೆ ತಲುಪಿಸುವ ಹೊಣೆ ಬಿತ್ತು.

ಸಮಾಜದ ನಡುವೆ ಬದುಕುವಾಗ ಯಾವುದೇ ವ್ಯಕ್ತಿ ಎಲ್ಲಾ ಸಮಯದಲ್ಲೂ ಸಜ್ಜನರಾಗಿಯೇ ಇರುತ್ತೇವೆ ಎಂದುಕೊಂಡರೆ ಬರುವ ಆಪತ್ತುಗಳಿಗೆ ಇದೊಂದು ಸಣ್ಣ ನಿದರ್ಶನ. ಒಂದು ಹೆಣ್ಣಿಗೆ ಅವಳ ಶಕ್ತಿ ಮೀರಿ ಸಾಮಗ್ರಿಗಳನ್ನು ಹೊರುವಂತೆ ಮಾಡಿದ್ದು ಗುರುಹಿರಿಯರೆನಿಸಿಕೊಂಡವರ ನಡೆ ಖಂಡನೀಯ. ಚೀಲಗಳ ಭಾರವನ್ನು ಹೊರಲಾಗುತ್ತಿಲ್ಲ. ಇಂತಹ ಸಂದರ್ಭದಲ್ಲಿ ಹೆಣ್ಣು ಎಂಬ ಕಾರಣಕ್ಕೆ ಭಾರವಾದ ಚೀಲಗಳನ್ನು ಹೇಗೇಗೋ ಹಿಡಿದು ಹೋಗಲು ಸಾಧ್ಯವಿಲ್ಲ. ಚೀಲಗಳೆರಡು ಎರಡೂ ಕೈಗಳನ್ನು ಗರಗಸದಂತೆ ಕೊಯ್ದು ಕೈ ಉರಿ ಬರುತ್ತಿದ್ದರೂ ವಿಧಿ ಇಲ್ಲದೆ ಮನೆ ತಲುಪಿಸಬೇಕಾಯಿತು. ನಂತರದ ದಿನಗಳಲ್ಲಿ ಇಂತವರನ್ನು ಕಂಡಾಗ ಗುರುಹಿರಿಯರಿಗೆ ವಿಧೇಯರಾಗಿರಬೇಕು ಎಂಬ ಭಾವ ಮುರಿದು ಬಿತ್ತು. ಒಬ್ಬ ವ್ಯಕ್ತಿಯಲ್ಲಿನ ಸದ್ಗುಣಗಳು ಕಠೋರತೆಯೆಡೆಗೆ ಬದಲಾಗುತ್ತಿದೆ ಎಂದರೆ ಅದರ ಹಿಂದಿನ ಭಾವ ಕಾರಣವಾಗಿರುತ್ತದೆ ಎನ್ನುವುದನ್ನು ಇದೊಂದು ಘಟನೆಯಿಂದ ತಿಳಿಯಬಹುದು. ಈ ಸಂಗತಿಯಿಂದ ಕಂಡುಕೊಂಡ ಸೂಕ್ಷ್ಮ ವಿಚಾರವೆಂದರೆ ಇಂದಿನ ದಿನಮಾನಗಳಲ್ಲಿ ಒಮ್ಮೊಮ್ಮೆ ಹಿರಿಯರು ಕಿರಿಯರು ಎಂಬ ಭಾವಕ್ಕಿಂತ ಅವರವರ ವ್ಯಕ್ತಿತ್ವ ಮತ್ತು ಯೋಗ್ಯತೆಗನುಸಾರ ವಿಧೇಯರಾಗಿರಬೇಕು ಎನ್ನುವುದು ಇಲ್ಲಿ ಮುಖ್ಯವಾಗುತ್ತದೆ.

'ಪರಮತ ಸಹಿಷ್ಣು ಮತ್ತು ಪರನಿಂದೆ ರಹಿತರೂ ಆಗಿರಬೇಕು ಎನ್ನುವುದು ನಾಲ್ಕನೆಯ ಸಂಕಲ್ಪ. ಪ್ರಬಂಧಕಾರರ ಪ್ರಕಾರ ಈ ಶಬ್ದಗಳ ಅಸ್ತಿತ್ವವನ್ನೇ

ಅಲ್ಲಗಳೆಯುವ ಧಾರ್ಮಿಕ ಸಂಘ ಸಂಸ್ಥೆಗಳ ಕಾರ್ಯಚಟುವಟಿಕೆಗಳ ಪರಿಚಯವಿಲ್ಲದಾಗ ಬಿಸಿ ತಟ್ಟಿಲ್ಲವೆಂದರ್ಥ. ಸಾರ್ವಜನಿಕ ಸ್ಥಳಗಳಲ್ಲಿ ಕಾರ್ಯನಿಮಿತ್ತ ಓಡಾಡುವಾಗ ಗೋಡೆಯ ಬರಹಗಳು ಧಾರ್ಮಿಕ ಚಿಂತನೆಯನ್ನು ಬಿತ್ತುವುದಲ್ಲದೆ ಧರ್ಮಕ್ಕಂಟಿದ ಕೆಲ ವ್ಯಕ್ತಿಗಳು ಅವಕಾಶವಾದೆಡೆ ಧರ್ಮದ ಮಹತ್ವವನ್ನು ಸಾರುವುದರ ಜೊತೆಗೆ ಧಾರ್ಮಿಕ ಅಂಧಕಾರವನ್ನು ಬಿತ್ತುವಲ್ಲಿ ತಲ್ಲೀನರಾಗುತ್ತಾರೆ. ಇದಕ್ಕೆ ನಿದರ್ಶನವೆಂಬಂತೆ ಪ್ರಬಂಧದ ನಿರೂಪಕರ ಗುಂಪೊಂದು ಕಾಲೇಜಿನಲ್ಲಿ ಏರ್ಪಡಿಸಿದ್ದ ಪ್ರದರ್ಶನ ನೋಡುವಾಗ ತಮಾಷೆಗೆ 'ನಾವು ದೀಪಾವಳಿ ಆಚರಿಸುವವರು' ಎನ್ನುತ್ತಿದ್ದಂತೆ ಗಂಟೆಗಟ್ಟಲೆ ಬೋಧನೆಗೆ ಒಳಗಾಗಬೇಕಾಯಿತು. ಇಂತಹ ಸಂದರ್ಭದಲ್ಲಿ ಬೋಧನೆ ಮಾಡುವವರಿಗೆ ಬೇಸರವನ್ನುಂಟುಮಾಡುವಂತಿಲ್ಲ. ಏಕೆಂದರೆ ಅನ್ಯಮತ ಮತ್ತು ಅನ್ಯರನ್ನು ನೋಯಿಸಬಾರದು ಎಂಬ ಸಂಕಲ್ಪವು ಆ ಕ್ಷಣಕ್ಕೆ ಸಹಿಸಿಕೊಳ್ಳುವಂತೆ ಮಾಡಿದರೂ ಸಹಿಷ್ಣುತೆ ಎಂಬ ಭಾವ ಅಲ್ಲಿಂದ ಹೊರಬರುತ್ತಿದ್ದಂತೆ ಕುಸಿಯಿತು.

ಯಾವುದೇ ಧರ್ಮ ಯಾವುದೇ ವ್ಯಕ್ತಿಗೆ ಬಂಧನವಾಗಿರಬಾರದು. ಮುಖ್ಯವಾಗಿ ಧರ್ಮವನ್ನು ಮತ್ತೊಬ್ಬರ ಮೇಲೆ ಏರುವ ಪರಿಯು ಮನುಷ್ಯ ಮನುಷ್ಯರ ನಡುವೆ ಕಂದಕವನ್ನು ನಿರ್ಮಿಸುತ್ತದೆ. ಇದು ರಾಜಕೀಯ ದಾಳವಾಗಿ ಒಳಪಟ್ಟಾಗ ಪರಿಸ್ಥಿತಿ ಇನ್ನೂ ಹದಗೆಡುತ್ತದೆ. ಇದಕ್ಕೆ ಅವಕಾಶವಾಗದಂತೆ ಪ್ರಜೆಗಳು ಪರಸ್ಪರ ಪ್ರೀತಿ, ವಿಶ್ವಾಸ ನಂಬಿಕೆ ಎಂಬ ಮಾನವೀಯ ಮೌಲ್ಯಗಳೊಂದಿಗೆ ಬದುಕಿದರೆ ಯಾವ ದುಷ್ಟ ಶಕ್ತಿಯೂ ಧರ್ಮವನ್ನು ದಾಳವನ್ನಾಗಿ ಮಾಡಿಕೊಳ್ಳಲು ಸಾಧ್ಯವಿಲ್ಲ. ಆಗ 'ಭಾರತವು ವೈವಿಧ್ಯತೆಯಲ್ಲಿ ಏಕತೆಯ ರಾಷ್ಟ್ರ'ವಾಗಿ ಸಾಕ್ಷಾತ್ಕಾರಗೊಳ್ಳಲು ಸಾಧ್ಯವಾಗುತ್ತದೆ. ಆಗ ಧರ್ಮ ಸಹಿಷ್ಣುಗಳಾಗಿರಬೇಕು ಎನ್ನುವುದಕ್ಕಿಂತ ಧರ್ಮ ಸಹಿಷ್ಣುಗಳಾಗಿದ್ದಾರೆ ಎಂಬುದು ಎಲ್ಲರಿಗೂ ಹಿತವನ್ನುಂಟು ಮಾಡುತ್ತದೆ.

'ಯಾರ ಮನಸ್ಸನ್ನು ನೋಯಿಸಬಾರದು' ಎಂಬುದು ಐದನೆಯ ಸಂಕಲ್ಪ. ಪ್ರಬಂಧದ ನಿರೂಪಕರು ಪುಸ್ತಕಗಳನ್ನು ಓದುವ, ಬರೆಯುವ ಹವ್ಯಾಸಯುಳ್ಳವರು ಎಂಬ ವಿಷಯ ಅವರ ಊರಿನವರೇ ಆದ ಸ್ವಯಂಘೋಷಿತ ಕವಿ ತಿಮ್ಮಣ್ಣ ಭಟ್ಟ ಕವಿಗಳಿಗೆ ತಿಳಿದಿರುತ್ತದೆ. ಸಾಮಾನ್ಯ ಕನ್ನಡ ಪಂಡಿತರಾದ ಇವರು ಪ್ರತಿ ಭಾನುವಾರವಾಗುತ್ತಿದ್ದಂತೆ ಗದ್ಯ-ಪದ್ಯಗಳೊಂದಿಗೆ ಮನೆಗೆ ಆಗಮಿಸುತ್ತಿದ್ದರು. ಅವರ ಬರಹಗಳನ್ನು ಓದಿ ವಿಮರ್ಶಿಸುವ ಕಾರ್ಯ ನಡೆಯಲೇಬೇಕಿತ್ತು. ಇದರಿಂದ ರಜಾವಧಿಯ ಯೋಜನೆಗಳು ಮೂಲೆ ಹಿಡಿದಿದ್ದವು. ಇವರಿಂದ ತಪ್ಪಿಸಿಕೊಳ್ಳಬೇಕು ಅಥವಾ ಅವರಿಗೆ ನೇರವಾಗಿ ಹೇಳಿ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಬೇಕೆಂದು ಕೊಂಡರೆ ಸಂಕಲ್ಪ ಅಡ್ಡಿ ಮಾಡುತ್ತಿತ್ತು.

ಸಮಾಜದ ಯಾವುದೇ ವ್ಯಕ್ತಿ ತನ್ನೆಲ್ಲಾ ಭಾವನೆಗಳನ್ನು ಒಬ್ಬ ವ್ಯಕ್ತಿಯಲ್ಲಿಯೇ ಹೇಳಿಕೊಳ್ಳಲು ಇಚ್ಛಿಸುವುದಿಲ್ಲ. ಏಕೆಂದರೆ ಒಬ್ಬೊಬ್ಬ ವ್ಯಕ್ತಿ ಒಂದೊಂದರಲ್ಲಿ ಪರಿಣಿತನಾಗಿರುತ್ತಾನೆ ಅಥವಾ ಯೋಗ್ಯನಾಗಿರುತ್ತಾನೆ. ಆ ವ್ಯಕ್ತಿತ್ವಕ್ಕನುಗುಣವಾಗಿ ತಮ್ಮ ಭಾವನೆಗಳನ್ನು ಹಂಚಿಕೊಳ್ಳಲು ಇಷ್ಟಪಡುತ್ತಾರೆ. ಈ ಇಷ್ಟ ಆ ಎದುರಿನ ವ್ಯಕ್ತಿಗೆ ಕಷ್ಟವಾಗಬಾರದಷ್ಟೆ. ಅವರ ಭಾವನೆಗಳು ಪ್ರತಿಸ್ಪಂದಿಸಲು ಮುಕ್ತವಾಗಿ ತೆರೆದುಕೊಳ್ಳುತ್ತವೆಯೇ ಎಂಬುದನ್ನು ಗಮನಿಸಿ ಕೊಳ್ಳುವುದು ಸೂಕ್ತ. ಆದರೆ ಈ ವರ್ತಮಾನ ದಿನಗಳಲ್ಲಿ ಪರಸ್ಪರ ಸಮಯಾವಕಾಶವನ್ನು ಕೊಡುಕೊಳ್ಳುವಿಕೆಯ ತಗ್ಗುವಿಕೆಯಿಂದ ಮನುಷ್ಯನ ಎಷ್ಟೋ ದುಃಖ ದುಮ್ಮಾನಗಳನ್ನು ಹೊರಹಾಕಲಾರದೆ ಮನೋರೋಗಿಗಳಾಗಿ, ಇನ್ನು ಮುಂದುವರಿದಂತೆ ಸೂಕ್ತ ಮಾರ್ಗದರ್ಶನ ಸಿಗದೆ ಜೀವನವನ್ನೆ ಅಂತ್ಯಗೊಳಿಸಿಕೊಳ್ಳುತ್ತಿರುವುದು ಬೇಸರದ ಸಂಗತಿ.

ಈ ಪ್ರಬಂಧದಲ್ಲಿ ಸಂಕಲ್ಪವನ್ನು ಮೀರಿದ ತುಡಿತವಿದೆ. ಹಿರಿಯರಿಗೆ ನೋವುಂಟು ಮಾಡಬಾರದು ಎಂಬ ಕಾರಣಕ್ಕೆ ಅವರ ಮಾತುಗಳನ್ನು ಆಲಿಸುವ ಸಂಗತಿ ಸ್ವಯಂ

ಇಷ್ಟವಿಲ್ಲದಿದ್ದರೂ ಆ ವ್ಯಕ್ತಿಗೆ ನೋವುಂಟು ಮಾಡದೆ ಮತ್ತೊಬ್ಬರಿಗಾಗಿ ಮಿಡಿಯುವ ಭಾವವನ್ನು ನಾವು ವಿಶೇಷವಾಗಿ ಗುರುತಿಸಬೇಕಾಗುತ್ತದೆ. ಇಂದಿನ ಯುಗಧರ್ಮದಲ್ಲಿ ಬಹುತೇಕವಾಗಿ ಪರಸ್ಪರ ಲಾಭವಿರದೆ ಸ್ಪಂದಿಸುವಿಕೆ ವಿರಳ. ಆದರೂ ಅಲ್ಲಲ್ಲಿ ಸ್ಪಂದಿಸುವಿಕೆಯ ಗುಣಧರ್ಮದವರು ನೆಲೆಸಿದ್ದಾರೆ. ಎಂದರೆ ಸಮಾಜದಲ್ಲಿ ಮೌಲ್ಯಗಳು ಕ್ವಚಿತ್ತಾಗಿಯಾದರೂ ಉಳಿದಿದೆ ಎಂದರ್ಥ. ಇಲ್ಲವಾದರೆ ಉಸಿರುಗಟ್ಟಿದ ವಾತಾವರಣದಲ್ಲಿ ಮನುಷ್ಯ ಬದುಕಬೇಕಾಗಿತ್ತು. ವಿಪರ್ಯಾಸವೆಂದರೆ ನಗರ ಪ್ರದೇಶದಲ್ಲಿ ಪರಸ್ಪರ ಪ್ರತಿಕ್ರಿಯಿಸುವ ಪ್ರಮಾಣ ಕಡಿಮೆಯಿದ್ದು ಬಹುತೇಕರು ಯಾಂತ್ರಿಕ ಜೀವನವನ್ನು ಅನುಭವಿಸುವ ಪರಿಪಾಠ ಬೆಳೆಯುತ್ತಿದೆ. ಮುಖ್ಯವಾಗಿ ಪ್ರೀತಿ, ವಿಶ್ವಾಸ, ನಂಬಿಕೆ ಇದ್ದೆಡೆ ಬಹುತೇಕ ಸಮಸ್ಯೆಗಳಿಗೆ ಪರಿಹಾರವಿರುತ್ತದೆ ಎಂಬುದು ವಾಸ್ತವವಾದ ಸಂಗತಿಯಾಗಿದೆ.

ಪ್ರಬಂಧದ ನಿರೂಪಕರು ಆದರ್ಶಗಳನ್ನು ಪಾಲಿಸುವಾಗ ಹಲವಾರು ಸವಾಲುಗಳು ಎದುರಾಗುತ್ತವೆ. ಆಗ ಸಂಕಲ್ಪಗಳನ್ನು ಪಾಲಿಸುವುದೋ ಬೇಡವೋ ಎಂಬ ಸಂದಿಗ್ಧ ಪರಿಸ್ಥಿತಿಯಾದಾಗ ಆತಂಕ ಶುರುವಾಗುತ್ತದೆ. ಈ ತೊಳಲಾಟವನ್ನು ಸ್ನೇಹಿತೆಯ ಬಳಿ ಹೇಳಿಕೊಂಡಾಗ; ವಾರದಲ್ಲಿ ಎರಡು ದಿನ ಸಜ್ಜನತೆಗೆ ದೀಕ್ಷಾಬದ್ಧರಾಗಿ ಆ ಎರಡು ದಿನ ಅಜ್ಞಾತವಾಗಿರುವ ಹಾಗೂ ಇನ್ನುಳಿದ ದಿನ ಜಂಟ್ಲ್‌ಮನ್(ಸಮಯ ಸಂದರ್ಭವರಿತು ಔಚಿತ್ಯಪೂರ್ಣ ನಡವಳಿಕೆ)ಆಗಿರು ಎನ್ನುತ್ತಾ ಈ ಅಸಾಧ್ಯವಾದದ್ದನ್ನು ಸಾಧಿಸುವುದು ಹುಚ್ಚುತನವೆಂಬಂತೆ ತಲೆಗೆ ಮೊಟಕಿ ಹೋಗುತ್ತಾರೆ.

ವಾಸ್ತವವಾಗಿ ಸ್ನೇಹಿತೆಯ ಈ ನಡವಳಿಕೆ ಔಚಿತ್ಯಪೂರ್ಣವಾದದ್ದು. ಈ ಆಧುನಿಕ ದಿನಗಳಲ್ಲಿ ಸಮಯ, ಸಂದರ್ಭ ಹಾಗೂ ವ್ಯಕ್ತಿಗಳನ್ನರಿಯದೆ ಎಲ್ಲಾ ಸಂದರ್ಭದಲ್ಲೂ ಸಜ್ಜನರಾಗಿಯೇ ಇರುತ್ತೇವೆ ಎಂದುಕೊಂಡರೆ ಆ ವ್ಯಕ್ತಿಗಳಿಗೆ ಸಮಾಜದಲ್ಲಿ ಹೆಚ್ಚು ದಿನ ಉಳಿಗಾಲವಿಲ್ಲ ಎಂದರ್ಥ. 'ಒಳ್ಳೆಯವರು ಈ ಭೂಮಿ ಮೇಲೆ ಹೆಚ್ಚು ದಿನ ಬದುಕಿರುವುದಿಲ್ಲ, ಒಂದು ವೇಳೆ ಬದುಕಿದ್ದರೂ ಅವರಿಗೆ ಕಷ್ಟ ಕಾರ್ಪಣ್ಯಗಳೇ ಹೆಚ್ಚು' ಎಂಬ ಹಿರಿಯರ ಮಾತು ಈ ಪ್ರಬಂಧಕ್ಕೆ ಹೆಚ್ಚು ಅನ್ವಯಿಸುತ್ತದೆ. ಈ ಮಾತು ಕಹಿಯಾದರೂ ಸತ್ಯವಾದದ್ದೆ. ಇದನ್ನರಿತ ಬಹುತೇಕರು ಈ ಮಾರ್ಗದಲ್ಲಿ ಸಾಗುವುದಿಲ್ಲ. ಆದರೆ ಸಮಾಜದ ಉಸಿರು ಕಟ್ಟಿದ ವಾತಾವರಣದಿಂದ ಮುಕ್ತವಾಗಿಸಲು ವಿರಳವಾಗಿಯಾದರೂ ವ್ಯಕ್ತಿಗಳು ಹುಟ್ಟಿ ಬರುತ್ತಾರೆ. ಬುದ್ಧ, ಬಸವ, ಅಂಬೇಡ್ಕರ್, ಜ್ಯೋತಿ ಬಾ ಫುಲೆ ದಂಪತಿಗಳು ಮೊದಲಾದ ಮಹನೀಯರು ದುಷ್ಟರೊಂದಿಗೆ ಹೊಂದಿಕೊಂಡು ಜೀವನ ನಡೆಸಿದ್ದರೆ, ಸಮಾಜದ ಸ್ಥಿತಿ ಡೋಲಾಯಮಾನವಾಗಿತ್ತು. ಹಾಗಾಗಿ ಅವರು ಸಂದರ್ಭವರಿತು ಮಾಡಿದ ಕೆಲಸ ಅವರನ್ನು ಅಜರಾಮರಗೊಳಿಸಿದೆ. ಒಂದು ವೇಳೆ ಸಮಾಜದೆಲ್ಲೆಡೆ ಎಲ್ಲಾ ಸಂದರ್ಭಕ್ಕೂ ಸರಿ–ತಪ್ಪುಗಳನ್ನು ಆಲೋಚಿಸದೆ ಸಜ್ಜನಿಕೆಯನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಹೆಜ್ಜೆ ಹಾಕಿದರೆ ಆ ಗುಣವನ್ನು ಮೆಚ್ಚಿ ಸದುಪಯೋಗಪಡಿಸಿಕೊಳ್ಳುವವರಿಗಿಂತ ದುರುಪಯೋಗಪಡಿಸಿಕೊಳ್ಳುವ ಮಂದಿಯನ್ನು ಸಮಾಜದಲ್ಲಿ ಹೆಚ್ಚು ನೋಡುತ್ತೇವೆ. ಪೂರ್ಣಪ್ರಮಾಣದಲ್ಲಿ ಇಂತಹ ಸಂಕಲ್ಪಗಳನ್ನು ತೊಟ್ಟು ಸಾಕಾರಗೊಳಿಸಿಕೊಂಡವರು ಈ ಭೂಮಿ ಮೇಲೆ ಯಾರು ಇಲ್ಲ. ಒಂದಲ್ಲ ಒಂದು ಸಂದರ್ಭದಲ್ಲಿ ಸಮಯವರಿತು ಮನ್ನಡೆಯಲೇ ಬೇಕಾಗುತ್ತದೆ. ಆಗಷ್ಟೆ ಈ ಜಗತ್ತಿನಲ್ಲಿ ಬದುಕಲು ಸಾಧ್ಯ.

ಕೊನೆಯ ಸಂಕಲ್ಪ 'ವೈರಿಗಳನ್ನು ಪ್ರೀತಿಸುವುದು'. ಇದನ್ನು ಪ್ರಬಂಧದ ನಿರೂಪಕರು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎನ್ನುವಂತೆ ಮಾಡಿದ ವ್ಯಕ್ತಿ ಪಕ್ಕದ ಮನೆಯ ಕೊಳಕು ಕಿಟ್ಟಿ. ಈತ ತನ್ನ ಸಿಂಬಳ ತಾನೆ ತಿನ್ನುತ್ತಿದ್ದ ಎಂಬ ಕಾರಣಕ್ಕೆ ಸಹಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಆದರೂ ಜಂಬೆ ಹಣ್ಣಿನ ಮರಕ್ಕೆ ಹತ್ತುತ್ತಿದ್ದ ಎಂಬ ಕಾರಣಕ್ಕೆ ಸಹಿಸಿಕೊಳ್ಳುತ್ತಿದ್ದರು.

ದೊಡ್ಡವರಾಗುತ್ತಿದ್ದಂತೆ ದ್ವೇಷ ಹೆಚ್ಚಾಗಲು ಮತ್ತೊಂದು ಕಾರಣವೆಂದರೆ ಆತ ದಡ್ಡ ಮತ್ತು ನಾಚಿಕೆಗೇಡಿ ಆಗಿದ್ದ. ಮೇಷ್ಟ್ರು ಜೋಕು ಹೇಳಿದ ಅರ್ಧ ಗಂಟೆಯ ಬಳಿಕ ಜೋರಾಗಿ ನಗುತ್ತಿದ್ದ. ಇಂತವನನ್ನು ನಿಮ್ಮ ಪಕ್ಕದ ಮನೆಯವನು ಎಂದಾಗ ಮುಜುಗರವಾಗುತ್ತಿತ್ತು. ಆದರೂ ಇದೊಂದು ಕಾರಣಕ್ಕೆ ಸಜ್ಜನರಾಗುವ ಪಟ್ಟವನ್ನು ಕಳೆದುಕೊಳ್ಳಬಾರದೆಂದು ಒಂದು ಉಪಾಯವನ್ನು ಹೂಡಿದರು. ಮನಸ್ಸಿನಲ್ಲಿ ಕಿಟ್ಟಿಯನ್ನು ಪ್ರೀತಿಸಿದರೂ ಎದುರಿಗೆ ಬಂದಾಗ ಬೈದು ಮುಖ ತಿರುಗಿಸದೆ ಇರುವುದನ್ನು ನಿಯಂತ್ರಿಸಿದರೆ ವೈರಿಯನ್ನು ಪ್ರೀತಿಸಿದಂತಾದರೂ ಕಿಟ್ಟಿಯನ್ನು ಪ್ರೀತಿಸಿದಂತೆ ಆಗಲಿಲ್ಲ. ಆದ್ದರಿಂದ ಸಜ್ಜನರ ಪಟ್ಟಕ್ಕೆ ಒಂದು ಸ್ಥಾನ ಕೆಳಗೆಯಾದರೂ ಸಜ್ಜನರಾಗುವ ಇಷ್ಟು ಪ್ರಯತ್ನಕ್ಕಾದರೂ ತೃಪ್ತಿಪಟ್ಟುಕೊಂಡೆ ಎಂಬ ನಿಲುವನ್ನು ವ್ಯಕ್ತಪಡಿಸಿದ್ದಾರೆ.

ಯಾವುದೇ ವ್ಯಕ್ತಿ ಆತ್ಮತೃಪ್ತಿಯೊಂದಿಗೆ ಬದುಕಲು ಸಾಧ್ಯ. ಆದರೆ ಇಂದಿನ ಸಮಾಜದಲ್ಲಿ ಆತ್ಮತೃಪ್ತಿಯನ್ನು ಪರಮೋಚ್ಚ ಮಟ್ಟಕ್ಕೆ ಕೊಂಡೊಯ್ಯಲು ಸಾಧ್ಯವಿಲ್ಲ ಎನ್ನುವುದು ಈ ಪ್ರಬಂಧದ ಮೂಲಕ ತಿಳಿಯಬಹುದಾದ ವಾಸ್ತವ ಸಂಗತಿಯಾಗಿದೆ. ಪ್ರಬಂಧದ ನಿರೂಪಕರು ಆದರ್ಶವನ್ನಿಟ್ಟುಕೊಂಡು ಪದೇ ಪದೇ ಸೋಲಾಗುತ್ತಿದ್ದಾಗ "ಈ ಜಗತ್ತಿನಲ್ಲಿ ಸಾಮಾನ್ಯ ಹುಲುಮಾನವಳಾಗಿ ಬದುಕುವುದರಲ್ಲಿ ಸಿಗುವ ಸ್ವಾತಂತ್ರ್ಯ, ಸಂತೋಷ, ಸುಖಗಳು ಸಜ್ಜನರಾಗಿ ಬದುಕಬೇಕೆಂಬ ಹಠಕ್ಕೆ ಬಿದ್ದು ಪಾಡು ಪಡುವವರಿಗೆ ಸಿಗಲು ಸಾಧ್ಯವಿಲ್ಲ"[2] ಎಂಬ ನಿರ್ಣಯಕ್ಕೆ ಬಂದರು. ಈ ಜಗತ್ತಿನಲ್ಲಿ ಪರಿಪೂರ್ಣವಾದದ್ದು ಯಾವುದೂ ಇಲ್ಲ ಎಂಬ ಸಮಾಧಾನವನ್ನು ತಂದುಕೊಟ್ಟದ್ದು, ಅವರಿಗೆ ಅನುಭವಗಳು ಬೆನ್ನು ಹತ್ತಿದಾಗ ಎಂಬ ಸಂಗತಿ ಗಮನಾರ್ಹವಾದದ್ದು.

ಲಲಿತ ಪ್ರಬಂಧಗಳಲ್ಲಿ 'ವಿನೋದ ಮತ್ತು ವಿಚಾರ' ಎರಡನ್ನು ನೋಡಲು ಸಾಧ್ಯ ಎಂಬುದಕ್ಕೆ ಈ ಪ್ರಬಂಧ ಸಾಕ್ಷಿಯಾಗಿದೆ. ಒಮ್ಮೊಮ್ಮೆ ಸಮಾಜವನ್ನು ನೇರವಾಗಿ ಎದುರಿಸಲು ಸಾಧ್ಯವಿಲ್ಲ. ಅಂತಹ ಸಂದರ್ಭದಲ್ಲಿ ಪ್ರಬಂಧಕಾರರು ಸಮಾಜದ ಪ್ರತಿನಿಧಿಯಾಗಿ ಪರೋಕ್ಷವಾಗಿ ತನ್ನನ್ನೇ ಒಳಗು ಮಾಡಿಕೊಂಡು ಸಮಾಜದ ಔಚಿತ್ಯ ಅನೌಚಿತ್ಯ ವಿಚಾರಗಳನ್ನು ಬರಹಕ್ಕೆ ಇಳಿಸುವ ಮೂಲಕ ಮೌಲ್ಯಗಳನ್ನು ಬಿತ್ತಲಾಗುತ್ತದೆ ಎಂಬುದು ಹೆಮ್ಮೆಯ ವಿಷಯ.

**ಕೊನೆಟಿಪ್ಪಣಿ**

1. ಭುವನೇಶ್ವರಿ ಹೆಗಡೆ. (2011). *ಸಮಗ್ರ ಲಲಿತ ಪ್ರಬಂಧಗಳು.* ಪು.ಸಂ. 28.
2. ಅದೇ. ಪು.ಸಂ. 64.

**ಆಕರ ಗ್ರಂಥ**


- ಭುವನೇಶ್ವರಿ ಹೆಗಡೆ. (2011). *ಸಮಗ್ರ ಲಲಿತ ಪ್ರಬಂಧಗಳು.* (ಮೊದಲನೆಯ ಮುದ್ರಣ). ಸಪ್ನ ಬುಕ್ ಹೌಸ್,


**ಪರಾಮರ್ಶನ ಗ್ರಂಥ**


- ರಾಮನಾಥ್, ಎನ್. (ಸಂ). (2017). *ಬನಸಿರಿ.* ತೇಜು ಪಬ್ಲಿಕೇಷನ್.